# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಜಯಕುಮಾರ್ ನಾಯಕ ಬಿ.ಕೆ. | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ ಹೆಸರು** | ಃ ಕುಮಾರ ನಾಯಕ | **18.12.2019** | |
| **ವಯಸ್ಸು** | ಃ 66 ವರ್ಷ | | |
| **ವೃತ್ತಿ** | ಃ ಸಮಾಜ ಸೇವಕ | **ಪ್ರಾ.ಸಾ. ಃ** | **01** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ. ಃ** | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

.ನನಗೆ ಮೃತ ರಾಜು ಈತನ ಪರಿಚಯ ಇತ್ತು. ಸುಮಾರು *3* ವರ್ಷದ ಹಿಂದೆ *2015* ರಲ್ಲಿ ಸಾಯಂಕಾಲ *4.45* ರಿಂದ *5.00* ಗಂಟೆ ಸಮಯದಲ್ಲಿ ಉದಯಗಿರಿಯ ಏರಿಯಾದಲ್ಲಿ ವಿನಾಯಕ ಟೀ ಅಂಗಡಿಯಲ್ಲಿ ನಾನು ಮತ್ತು ರಾಜು ಟೀ ಕುಡಿದ ನಂತರ ರಾಜು ಈತನು ದಿನಪತ್ರಿಕೆಯನ್ನು ಓದುತ್ತಿದ್ದನು. ನಾನು ಟೀ ಕುಡಿದ ನಂತರ ಅಂಗಡಿಯವನಿಗೆ ಹಣ ಕೊಡಲು ಕೌಂಟರ್ ಹತ್ತಿರ ಹೋಗಿದ್ದೆನು. ಹಣ ಕೊಟ್ಟು ಆತನಿಂದ ಚಿಲ್ಲರೆ ಉಳಿದ ಹಣವನ್ನು ಪಡೆಯಲು ನಾನು ಅಲ್ಲಿಯೇ ನಿಂತಿದ್ದೆನು. ಆ ಸಮಯದಲ್ಲಿ ಒಬ್ಬ ವ್ಯಕ್ತಿ ಹೊರಗಡೆ ಬಿದ್ದ ಶಬ್ದ ಕೇಳಿಸಿತು. ಆಗ ನಾನು ಹೊರಗೆ ಬಂದು ನೋಡಿದಾಗ ರಾಜು ಈತನು ಹೋಟೇಲ್ ಮುಂಭಾಗದಲ್ಲಿರುವ ಪುಟ್ ಪಾತ್ ನಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದನು. ಅದನ್ನು ನೋಡಿ ನನಗೆ ಶಾಕ್ ಹಾಗೂ ಗಾಬರಿ ಆಗಿ ಆತನ ಬಾಯಿಗೆ ನೀರು ಹಾಕಿ ಉಪಚಾರ ಮಾಡಿದೆನು. ಅಲ್ಲಿ ಯಾರು ಸುತ್ತ ಮುತ್ತ ನನಗೆ ಕಾಣಲಿಲ್ಲ. ನಂತರ ಪೊಲೀಸ್ ನವರು ಬಂದು ಗಾಯಾಳು ರಾಜುವನ್ನು ಆಸ್ಪತ್ರೆಗೆ ದಾಖಲು ಮಾಡಿದರು. ನಂತರ ಪೊಲೀಸ್ ಠಾಣೆಗೆ ಫಿರ್ಯಾದಿ ಕೊಟ್ಟಿರುತ್ತೇನೆ. ಫಿರ್ಯಾದಿಯನ್ನು ನಿ.ಪಿ.*1* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*1(ಎ)* ಎಂದು ಗುರುತಿಸಲಾಯಿತು. ಫಿರ್ಯಾದಿಯನ್ನು ಠಾಣೆಯಲ್ಲಿ ಬರೆದಿರುತ್ತಾರೆ. ನಂತರ ಪೊಲೀಸ್ ನವರು ಸ್ಥಳಕ್ಕೆ ಬಂದು ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಸ್ಥಳದ ಪಂಚನಾಮೆಯನ್ನು ನಿ.ಪಿ.*2* ಎಂದು, ಅದರ ಮೇಲಿರುವ ಸಾಕ್ಷಿಯ

ಸಹಿಯನ್ನು ನಿ.ಪಿ.*2*(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸ್ ನವರಿಗೆ ಸ್ಥಳವನ್ನು ತೋರಿಸಿರುತ್ತೇನೆ. ಪೊಲೀಸ್ ನವರು ಸ್ಥಳದಿಂದ ಮೊಬೈಲ್ ಫೋನ್, ಗಾಡಿ ಕೀ ಮತ್ತು ಪಾಟೇಟ್ ಡೈರಿಯನ್ನು ಹಾಗೂ ಇನ್ನಿತರ ವಸ್ತುಗಳನ್ನು ಜಪ್ತಿ ಮಾಡಿರುತ್ತಾರೆ. ಇದನ್ನು ಬಿಟ್ಟು ಬೇರೆ ಯಾವುದನ್ನು ಜಪ್ತಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ನಂತರ ಪೊಲೀಸ್ ನವರು ನನ್ನ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ ಪೊಲೀಸ್ ನವರು ನನಗೆ ಸಿ.ಸಿ.ಬಿ. (ಸಿಟಿ ಕ್ರೈಂ ಬ್ರಾಂಚ್ ಕಚೇರಿ) ಗೆ ಕರೆದುಕೊಂಡು ಹೋಗಿದ್ದರು. ನಂತರ ನಾನು ಗುರುತಿನ ಕವಾತ್ತಿನ ಸಲುವಾಗಿ ನನ್ನನ್ನು ಜೈಲಿಗೆ ಕರೆದುಕೊಂಡು ಹೋಗಿದ್ದರು. ನಾನು ಜೈಲಿಗೆ ಹೋದಾಗ ನಾನು ಜೈಲಿನಲ್ಲಿ ಆರೋಪಿ ನಂ.*1* ಇವರನ್ನು ನೋಡಿರುತ್ತೇನೆ. ನಾನು ಘಟನಾ ಸ್ಥಳದಲ್ಲಿ ನಾನು ಆರೋಪಿತರನ್ನು ನೋಡಿರುವುದಿಲ್ಲ. *1* ನೇ ಆರೋಪಿತನು ಘಟನೆ ಸ್ಥಳಕ್ಕೆ ಬಂದಿರುವುದನ್ನು ನಾನು ನೋಡಿರುವುದಿಲ್ಲ. *1* ನೇ ಆರೋಪಿತನು ರಾಜು ಈತನಿಗೆ ಕಬ್ಬಿಣದ ಮಚ್ಚಿನಿಂದ ಹಲ್ಲೆ ಮಾಡಿದ್ದಾರೆ ಎಂದು ನಾನು ಪೊಲೀಸ್ ನವರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿಯು ಗುರುತು ಹಚ್ಚುವ ಕವಾಯತ್ತಿನ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾನೆ. ಸದರಿ ಸಹಿಯನ್ನು ನಾನು ಉದಯಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಗುರುತು ಹಚ್ಚುವ ಕವಾಯತ್ತನ್ನು ನಿ.ಪಿ.*3* ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.*3*(ಎ) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

.ದಿನಾಂಕಃ **13.03.2016** ರಂದು ಸಂಜೆ **4.45** ಗಂಟೆ ಸಮಯದಲ್ಲಿ ಉದಯಗಿರಿಯ ಏರಿಯಾದಲ್ಲಿ ವಿನಾಯಕ ಟೀ ಸ್ಟಾಲ್ ನಲ್ಲಿ ನಾನು ಮತ್ತು ರಾಜು ಟೀ ಕುಡಿಯುತ್ತಿದೇವೆ ಎಂದರೆ ಸರಿ ಇದೆ. ಆಗ ಎಂ.ಜಿ. ರಸ್ತೆಯ ಪುಟ್ ಪಾತ್ ನಲ್ಲಿ ಸುಮಾರು **30-35** ವಯಸ್ಸಿನ ವ್ಯಕ್ತಿಯು

ನಡೆದುಕೊಂಡು ಬಂದು ಏಕಾಏಕಿ ತನ್ನ ಹಿಂಭಾಗದಲ್ಲಿ ಇಟ್ಟುಕೊಂಡ ಮಚ್ಚನ್ನು ತೆಗೆದುಕೊಂಡು ಟೀ ಸ್ಟಾಲ್ ಮುಂಭಾಗ ಕುಳಿತಿದ್ದ ರಾಜು ಈತನಿಗೆ ಕೊಲೆ ಮಾಡುವ ಉದ್ದೇಶದಿಂದ ರಾಜು ಈತನ ತಲೆಯ ಎಡಭಾಗ, ಎಡಕಿವಿಯ ಬಳಿ ಹೊಡೆದು ರಕ್ತಗಾಯ ಉಂಟುಮಾಡಿ ಮಚ್ಚಿನ ಸಮೇತ ಅಲ್ಲಿಂದ ಓಡಿ ಹೋದನು ಎಂದು ಫಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅದನ್ನು ನೋಡಿ ಗಾಬರಿಯಾಗಿ ನಾನು ಮತ್ತು ಜಯರಾಮು ರಸ್ತೆಯ ಬದಿಯಲ್ಲಿ ಬಿದ್ದು ನೆರಳಾಡುತ್ತಿದ್ದ ರಾಜುರವನ್ನು ಪ್ರಾಣ ಉಳಿಸಲು ಅಕ್ಕ-ಪಕ್ಕದವರನ್ನು ಕೂಗಿ ಕರೆದಿರುತ್ತೇವೆ ಎಂದು ಫಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಂತರ ಉದಯಗಿರಿ ಸರ್ಕಲ್ ನಲ್ಲಿ ಕರ್ತವ್ಯದಲ್ಲಿದ್ದ ಒಬ್ಬ ಟ್ರಾಫಿಕ್ ಪೊಲೀಸ್ ಪೇದೆ ಬಂದು ಒಂದು ಆಟೋ ರಿಕ್ಷಾವನ್ನು ತಡೆದು ಅಕ್ಕ-ಪಕ್ಕದವರ ಸಹಾಯದಿಂದ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಮತ್ತು ನಾನು ನನ್ನ ಮೋಟಾರು ಸೈಕಲನ್ನು ತೆಗೆದುಕೊಂಡು ಅವರನ್ನು ಹಿಂಭಾಲಿಸಿಕೊಂಡು ಹೋದೆನು ಎಂದು ಫಿರ್ಯಾದಿಯಲ್ಲಿ ಹೇಳಿ ಬರೆಸಿರುತ್ತೇನೆ ಎಂದು ಕೇಳಿದ್ದಕ್ಕೆ ನಾನು ಆಸ್ಪತ್ರೆಗೆ ಹೋಗಿದ್ದು ನಿಜ ಎಂದು ಹೇಳಿರುತ್ತಾರೆ. ಕೆ ಆರ್ ಆಸ್ಪತ್ರೆ ಯಲ್ಲಿ ಸಂಜೆ **5.55** ಗಂಟೆಗೆ ಗಾಯಾಳು ರಾಜು ಈತನು ಮೃತಪಟ್ಟಿದ್ದಾನೆ ಎಂದು ವೈದ್ಯರು ತಿಳಿಸಿದ್ದರು ಎಂದು ಸೂಚಿಸುವುದು ಸರಿ ಇದೆ. ಒಬ್ಬ ವ್ಯಕ್ತಿ ಹಳೇ ದ್ವೇಷದಿಂದ ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ತಲೆಯ ಮೇಲೆ ಹೊಡೆದು ರಕ್ತ ಗಾಯ ಮಾಡಿದ್ದಾರೆ ಎಂದು ಫಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಹಲ್ಲೆ ಮಾಡಿದ ವ್ಯಕ್ತಿ **30** ರಿಂದ **35** ವರ್ಷ ವಯಸ್ಸಿನವನು ಆತನನ್ನು ನೋಡಿದ್ದು ಮುಂದೆ ನೋಡಿದರೆ ಆತನನ್ನು ನೋಡಿ ಗುರುತಿಸುತ್ತೇನೆ ಎಂದು ಫಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ **1** ನೇ ಆರೋಪಿತನು ರಾಜು ಈತನ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ಎಂದು ಕೇಳಿದ್ದಕ್ಕೆ ನಾನು ಆತನನ್ನು ನೋಡಿರುವುದಿಲ್ಲ. ಪಂಚನಾಮೆ ಮಾಡುವಾಗ ಪೊಲೀಸ್ ನವರು ಸ್ಥಳದಿಂದ ರಕ್ತ ಮಿಶ್ರಿತ ಸಣ್ಣ-ಸಣ್ಣ ಕಲ್ಲು ಮತ್ತು ಟಾರು ಹಾಗೂ ರಕ್ತವಲ್ಲದ ಕಲ್ಲು ಮತ್ತು ಟಾರು, ಮೈಸೂರು ಮಿತ್ರ ದಿನ ಪತ್ರಿಕೆ ಒಂದು ಲಗ್ನ ಪತ್ರಿಕೆ ಇವುಗಳನ್ನು ಅಮಾನತು ಪಡಿಸಿಕೊಂಡು ಪಂಚನಾಮೆ ಬರೆದು ಪಂಚನಾಮೆಯ ಮೇಲೆ ಸ್ಥಳದಲ್ಲೇ ನನ್ನ ಸಹಿ ತೆಗೆದುಕೊಂಡರು ಎಂದು ಸೂಚಿಸುವುದು ಸರಿ ಇದೆ. ಪಂಚನಾಮೆ ಮಾಡುವಾಗ ರಾಜು

ಈತನ ಮೋಟಾರು ಬೈಕ್ ಅಲ್ಲೇ ಸ್ಥಳದಲ್ಲಿ ಇತ್ತು ಎಂದರೆ ಸರಿ ಇದೆ. ಸದರಿ ಅಮಾನತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

ದಿನಾಂಕಃ **15.03.2016** ರಂದು ಪೊಲೀಸ್ ನವರ ಮುಂದೆ ಮುಂದುವರೆದ ಹೇಳಿಕೆಯನ್ನು ನೀಡಿ ಸದರಿ ಹೇಳಿಕೆಯನ್ನು ರಾಜು ಈತನನ್ನು ಯಾವ ಕಾರಣಕೋಸ್ಕರ ಕೊಲೆ ಮಾಡಿದ್ದಾರೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.*4* ಎಂದು ಗುರುತಿಸಲಾಯಿತು. ನಂತರ ಮೈಸೂರಿನ ತಹಶೀಲ್ದಾರಾದ ಚಂದ್ರಕುಮಾರ ಇವರು *1* ನೇ ಆರೋಪಿತನ ಗುರುತು ಹಚ್ಚುವ ಕವಾಯತ್ತಿಗೆ ನನ್ನನ್ನು ದಿನಾಂಕಃ ***14.09.2016*** ರಂದು ಕರೆಯಿಸಿದ್ದರು ನಾನು *1* ನೇ ಆರೋಪಿತನನ್ನು ಗುರುತಿನ ಕವಾಯತ್ತಿನಲ್ಲಿ ಗುರುತಿಸಿದ್ದೀರಿ ಎಂದು ಕೇಳಿದ್ದಕ್ಕೆ ಪೊಲೀಸ್ ನವರ ಸೂಚನೆಯ ಮೇರೆಗೆ ನಾನು *1* ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ಎಂದು ಹೇಳುತ್ತಾರೆ. ಪೊಲೀಸ್ ನವರ ಸೂಚನೆಯ ಮೇರೆಗೆ ನಾನು *1* ನೇ ಆರೋಪಿತನನ್ನು ಗುರುತಿಸಿರುತ್ತೇನೆ ಎಂದು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುತಿನ ಕವಾಯತ್ತಿಗೆ ಗುರುತು ಕವಾಯತು ನಡೆದ ಸ್ಥಳದಲ್ಲಿ ಸಹಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ ಇದೆ. ನ್ಯಾಯಾಯದ ಮುಂದೆ ಇರುವ ಲಗ್ನ ಪತ್ರಿಕೆ ಮತ್ತು ದಿನಪತ್ರಿಕೆಯನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿ.ಪಿ.*5* ಮತ್ತು ನಿ.ಪಿ.*6* ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ರಕ್ತ ಮಿಶ್ರಿತ ಸಣ್ಣ ಕಲ್ಲು ಮತ್ತು ಟಾರು ಹಾಗೂ ರಕ್ತವಲ್ಲದ ಸಣ್ಣ ಕಲ್ಲು ಮತ್ತು ಟಾರು ಇವುಗಳನ್ನು ಮು.ಮಾ.*1* ಮತ್ತು ಮು.ಮಾ.*2* ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>

.ಫಿರ್ಯಾದಿಯಲ್ಲಿ ಪೊಲೀಸ್‌ನವರು ಬರೆದು ಸಹಿ ಮಾಡು ಎಂದಿದ್ದಕ್ಕೆ ನಾನು ಫಿರ್ಯಾದಿಯ ಮೇಲೆ ಸಹಿ ಮಾಡಿರುತ್ತೇನೆ. ಫಿರ್ಯಾದಿಯಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ನನ್ನ ಸಮಕ್ಷಮ ಪಾಕೇಟ್ ಡೈರಿ ಜಪ್ತಿ ಮಾಡಿದ್ದನ್ನು ಬಿಟ್ಟರೇ ಬೇರೆ ಯಾವುದನ್ನು

ವಸ್ತುಗಳು ಜಪ್ತಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ. *1* ನೇ ಆರೋಪಿತನನ್ನು ನಾನು ಜೈಲಿನಲ್ಲಿ ನೋಡುವುದಕ್ಕಿಂತ ಮೊದಲು ಸಿ.ಸಿ.ಬಿ. (ಸಿಟಿ ಕ್ರೈಂ ಬ್ರಾಂಚ್) ಕಚೇರಿಯಲ್ಲಿ ನೋಡಿರುತ್ತೇನೆ ಎಂದರೆ ಸರಿ ಇದೆ. ಪೊಲೀಸ್ ನವರು *1* ನೇ ಆರೋಪಿತನು ಇದೇ ವ್ಯಕ್ತಿ ಎಂದು ಹೇಳಿದ್ದಕ್ಕೆ ನನಗೆ ಗೊತ್ತಾಯಿತು ಎಂದರೆ ಸರಿ ಇದೆ. ಪೊಲೀಸ್ ನವರು *1* ನೇ ಆರೋಪಿತನನ್ನು ಸಿ.ಸಿ.ಬಿ. (ಸಿಟಿ ಕ್ರೈಂ ಬ್ರಾಂಚ್) ಕಚೇರಿಯಲ್ಲಿ ತೋರಿಸಿದ್ದರಿಂದ ಜೈಲಿನಲ್ಲಿ ಕೂಡ ಅದೇ ವ್ಯಕ್ತಿಯನ್ನು ಗುರುತಿಸಿದ್ದೇ ಎಂದರೆ ಸರಿ ಇದೆ. ಗುರುತಿನ ಕವಾಯತ್ತಿನಲ್ಲಿ ಆ ದಿವಸ *1* ನೇ ಆರೋಪಿತನನ್ನು ಬಿಟ್ಟರೇ ಬೇರೆ ಯಾರು ಇರಲಿಲ್ಲ ಎಂದರೆ ಸರಿ ಇದೆ.

***ಮರು ವಿಚಾರಣೆ:-*** *ಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***